ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... 012-20-000115 ..... ಪುಟದ ಸಂಖ್ಯೆ ..... —01— .....

..... ಕಡತದ ಸಂಖ್ಯೆ SE/TVCC/GL/11/24-25

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿವೆ,

ವಿಷಯ:– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿಸುವ ಕುರಿತು ಟಿವಿಸಿಸಿ ವಿಭಾಗದಿಂದ ತಪಾಸಣೆ ಕೈಗೊಳ್ಳುವ ಬಗ್ಗೆ.

ಉಲ್ಲೇಖ:–
1. ವಿಶೇಷ ಆಯುಕ್ತರು (ಹಣಕಾಸು) ರವರ ಕಛೇರಿ ಸಂಖ್ಯೆ: ವಿಆ(ಹ)ಪಿಆರ್/ಇ–53050/2024–25,06.04.2024, 15.04.2024, 18.04.2024 & 19.04.2024
2. ಇ–ಆಫೀಸ್ ಸಂಖ್ಯೆ:53050 ನೋಟ್ (60) ದಿ: 08.04.2024 ರಂದು ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ.
3. ಮುಖ್ಯ ಅಭಿಯಂತರರು (ಟಿವಿಸಿಸಿ) ರವರ ಕಛೇರಿ ಸಂಖ್ಯೆ: ಮು.ಅ(ಟಿವಿಸಿಸಿ)ಜಿಎಲ್/09/2024–25, ದಿ:06.05.2024.

******

01) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯ ಆಯುಕ್ತರು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೈಗೊಂಡಿರುವ ಕೆ.ಆರ್.ಐ.ಡಿಎಲ್ ಕಾಮಗಾರಿಗಳ ಬಿಲ್ಲುಗಳನ್ನು ಟಿವಿಸಿಸಿ ವಿಭಾಗದಿಂದ ತಪಾಸಣೆ ಕೈಗೊಳ್ಳುವ ಸಂಬಂದ ಉಲ್ಲೇಖ (02) ರ ಟಿಪ್ಪಣಿ ಹಾಳೆಯಲ್ಲಿ ಆದೇಶಿಸಿರುವಂತೆ, ಕಾಮಗಾರಿಗಳ ಸ್ಥಳ ತಪಾಸಣೆ ನಡೆಸಿ ವರದಿಗಳನ್ನು ನೀಡಲು ಸೂಚಿಸಿರುವುದರನ್ವಯ ಮುಖ್ಯ ಅಭಿಯಂತರರು ರವರ ಉಲ್ಲೇಖ (03) ರಲ್ಲಿ ಕಛೇರಿ ಆದೇಶವನ್ನು ಜಾರಿಗೊಳಿಸಲಾಗಿದೆ. ಅದರಂತೆ ಜಾಬ್ ಕೋಡ್ ನಂ: 012–20–000115 ಕಾಮಗಾರಿಗೆ ಸಂಬಂಧಪಟ್ಟ ಅನುಷ್ಠಾನ ಇಂಜಿನಿಯರ್‌ಗಳೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿಯ ಕಡತದ ನಕಲು ಪ್ರತಿ ಹಾಗೂ ಇತರೆ ದಾಖಲೆಗಳನ್ನು ಪಡೆದು ಸ್ಥಳ ತಪಾಸಣೆ ಕೈಗೊಂಡಿದ್ದು ವರದಿಯು ಈ ಕೆಳಕಂಡಂತೆ ಇರುತ್ತದೆ.

ಕಡತ ಪರಿಶೀಲನಾ ವರದಿ

Name of the Work:-	Improvements to roads and drains in Gangamma Police Station beside road in ward no 12 Shettyhalli, Shettyhalli Sub Division
Grant	P3296 14th Finance Commission Works - Road and Footpath Maintenance
Job Code:-	012–20–000115
Estimated Cost:-	Rs.199.00 lakhs
Administrative Sanctioned No-	ಬಿಬಿಎಂಪಿ/ಕಾ.ಪಾ.ಅ/ದಾ.ವಿ/ಆ.ಮ/ 249/2019–20, ದಿನಾಂಕ: 16–03–2020
Technical Sanctioned No-	ಮು.ಅ.(ದಾ)/ತಾ.ಮ/82/ 2019–20, ದಿನಾಂಕ: 16–03–2020
Work Order No:-	EE/DD/WO/ 76/2020-21 , Dated: 20-03-2020.
Agency:-	ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, (KRIDL)
Bill Status:-	First and Part Bill
Bill Amount	Rs. 61,72,119/-

ವಿಷಯ : 012-20-000115

ಪುಟದ ಸಂಖ್ಯೆ ..... -02-

ಕಡತದ ಸಂಖ್ಯೆ SE/TVCC/GL/11/2024-25

ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ ಸಂಖ್ಯೆ

- ಸದರಿ ಕಾಮಗಾರಿಯ ಕಡತವನ್ನು ಪರಿಶೀಲಿಸಲಾಗಿದ್ದು ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾದಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.
- ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿನ ಛಾಯಾಚಿತ್ರಗಳು ಕಡತದಲ್ಲಿ ಲಭ್ಯವಿರುತ್ತದೆ. ಸದರಿ ಕಾಮಗಾರಿಯ ಗುಣಮಟ್ಟ ಬಗ್ಗೆ ಪರೀಕ್ಷಾ ಪ್ರಯೋಗಾಲಯದಿಂದ ಪಡೆದಿರುವ ವರದಿಗಳು ಕಡತದಲ್ಲಿ ಲಭ್ಯವಿರುವುದನ್ನು ಗಮನಿಸಲಾಗಿದೆ.

ಸ್ಥಳ ಪರಿಶೀಲನಾ ವರದಿ

02) ಉಲ್ಲೇಖ (03) ರಲ್ಲಿ ಮುಖ್ಯ ಅಭಿಯಂತರರು (ಟಿವಿಸಿಸಿ) ರವರು ಸೂಚಿಸಿರುವಂತೆ ಸಂಬಂಧಪಟ್ಟವರಿಗೆ ಕಡತದ ಜೊತೆ ಸ್ಥಳ ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿ, ಶ್ರೀ.ಕೃಷ್ಣಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ ಉಪವಿಭಾಗ) ಹಾಗೂ ಶ್ರೀ.ಮಂಜೇಗೌಡ, ಕಿರಿಯ ಅಭಿಯಂತರರು ರವರುಗಳು ಸ್ಥಳ ಪರಿಶೀಲನೆಗೆ ಹಾಜರಿದ್ದು, ಸದರಿ 1ನೇ ಮತ್ತು ಭಾಗಶಃ ಬಿಲ್ಲಿಗೆ ಸಂಬಂಧಿಸಿದಂತೆ ಕಾಮಗಾರಿಯನ್ನು ಸದರಿರವರು ತೋರಿಸಿದಂತೆ ದಿನಾಂಕ: 19.06.2024 ರಂದು ಜಂಟಿಯಾಗಿ ಸ್ಥಳ ಪರಿಶೀಲಿಸಲಾಗಿರುತ್ತದೆ.

03) ಪ್ರಸ್ತುತ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರದೇಶಗಳಲ್ಲಿ ಕಾಮಗಾರಿ ಕೈಗೊಂಡಿರುವ ಸ್ಥಳಗಳನ್ನು ಸಂಬಂಧಪಟ್ಟ ಅಭಿಯಂತರರುಗಳು ಗುರುತಿಸಿ ತೋರಿಸಿದಂತೆ ಭೌತಿಕವಾಗಿ ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ.

- ವಾರ್ಡ್ ನಂ:12 ರ ಶೆಟ್ಟಿಹಳ್ಳಿ ಉಪವಿಭಾಗದ ವ್ಯಾಪ್ತಿಯಲ್ಲಿ ಅಬ್ಬಿಗೆರೆ ಇಂಡಸ್ಟ್ರೀಯಲ್ ಏರಿಯದ 05 ರಸ್ತೆಗಳಿಗೆ ಡಾಂಬರೀಕರಣ ಹಾಕುವ ಕಾಮಗಾರಿ ಕೈಗೊಂಡಿರುವುದಾಗಿ ಗುರುತಿಸಿ ತೋರಿಸಿದ್ದು, ಸದರಿ ರಸ್ತೆಗಳು ಡಾಂಬರೀಕರಣಗೊಂಡಿರುವುದನ್ನು ಗಮನಿಸಲಾಗಿರುತ್ತದೆ. ಸದರಿ ರಸ್ತೆಗಳಲ್ಲಿ ಅಲ್ಲಲ್ಲಿ ರಸ್ತೆ ಅಗೆತಗಳಿರುವುದನ್ನು ಗಮನಿಸಲಾಗಿದ್ದು, ಮಳೆನೀರುಗಾಲುವೆ ಕಾಮಗಾರಿ ಸಂಬಂಧ ಪಕ್ಕದಲ್ಲಿರುವ ರಸ್ತೆಯನ್ನು ಅಲ್ಲಲ್ಲಿ ಅಗೆದಿರುವುದನ್ನು ಗಮನಿಸಲಾಗಿರುತ್ತದೆ.

04) ಮುಂದುವರೆದು,

- ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಕಾಮಗಾರಿಯ 1ನೇ ಮತ್ತು ಭಾಗಶಃ ಬಿಲ್ಲನ್ನು ರೂ. 61,72,119/- ಗಳಿಗೆ ತಯಾರಿಸಿ ಪಾವತಿಗಾಗಿ ಸಲ್ಲಿಸಿರುತ್ತಾರೆ.
- ಸದರಿ ಕಾಮಗಾರಿಗೆ ದಿನಾಂಕ: 20-03-2020 ರಂದು ಕಾರ್ಯಾದೇಶವನ್ನು ನೀಡಿದ್ದು, ದಿನಾಂಕ:10.07.2020 ರಂದು ಅಂತಿಮ ಬಿಲ್ಲನ್ನು ದಾಖಲಿಸಲಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯನ್ನು ಇದೇ ಅನುದಾನದಲ್ಲಿ ಕೈಗೊಂಡಿರುವ ಬಗ್ಗೆ ಖಚಿತವಾಗಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಆದರೂ ಸ್ಥಳ ತಪಾಸಣಾ ಸಂದರ್ಭದಲ್ಲಿ ಕಾಮಗಾರಿಗೆ ಅಳವಡಿಸಿರುವ ಐಟಂಗಳ ಬಗ್ಗೆ ತಪಾಸಣೆ ನಡೆಸಲಾಗಿ, ಕಾಮಗಾರಿಗಳನ್ನು ಭೌತಿಕವಾಗಿ ಅನುಷ್ಠಾನಗೊಳಿಸಿರುವುದು ಕಂಡುಬಂದಿದ್ದು, ಕಡತದಲ್ಲಿ ಕಾರ್ಯಪಾಲಕ ಅಭಿಯಂತರರು ರವರು ಗುಣಮಟ್ಟ ಹಾಗೂ ತೃಪ್ತಿಕರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಾಗಿ ದೃಢೀಕರಿಸಿರುತ್ತಾರೆ.
- ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಅನುಷ್ಟಾನ ಹಂತದ ಅಭಿಯಂತರರು ಸದರಿ ಕಾಮಗಾರಿಯನ್ನು ಅಂದಾಜುಪಟ್ಟಿ ತಯಾರಿಕೆಯಿಂದ ಹಿಡಿದು ಗುಣಮಟ್ಟದ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... DIR-20-000115 ..... ಪುಟದ ಸಂಖ್ಯೆ ...—03—.....

..... ಕಡತದ ಸಂಖ್ಯೆ SE/TVC/GL/1/24-25

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಅಭಿಪ್ರಾಯಗಳು

ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಹಾಗೂ ಅಳತೆ ಮಸ್ತಕದಲ್ಲಿ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) / ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರುಗಳು ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಲಾಗಿದೆ ಎಂಬುದನ್ನು ದೃಢೀಕರಿಸಿರುತ್ತಾರೆ.

- ಪ್ರಶ್ನಿತ ಕಾಮಗಾರಿಯಲ್ಲಿನ ಅಂಶಗಳನ್ನು ಈ ಹಿಂದೆ ಯಾವುದೇ ಅನುದಾನದಲ್ಲಿ ಕೈಗೊಳ್ಳದೇ ಇರುವ ಬಗ್ಗೆ ಹಾಗೂ ಮುಂದೆ ಯಾವುದೇ ಕ್ರಿಯಾಯೋಜನೆಯಲ್ಲಿ ಪ್ರಸ್ತಾವನೆ ಸಲ್ಲಿಸದೇ ಇರುವ ಬಗ್ಗೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು ದೃಢೀಕರಿಸಿರುವುದನ್ನು ಕಡತದಲ್ಲಿ ಗಮನಿಸಲಾಗಿರುತ್ತದೆ.
- ಸದರಿ ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಮೂರನೇ ಪಾರ್ಟಿ ಸಮಾಲೋಚಕರಾದ BANGALORE UNIVERSITY DEPARTMENT OF CIVIL ENGINEERING ಸಂಸ್ಥೆಯವರು ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ದೃಢೀಕರಿಸಿ ನೀಡಿರುವ ಪರೀಕ್ಷಾ ವರದಿಯು ಕಡತದಲ್ಲಿ ಅಡಕವಿರುವುದು ಕಂಡುಬಂದಿದ್ದು, ಗುಣಮಟ್ಟ ಪರೀಕ್ಷೆಯ ವರದಿಗಳನ್ನು ಗಮನಿಸಲಾಗಿ ನಿಗದಿತ ಪರಿಮಿತಿಯಲ್ಲಿರುವುದು ಕಂಡುಬಂದಿರುತ್ತದೆ.
- ಕಡತದಲ್ಲಿಯ ದಾಖಲಾತಿಗಳನ್ನು ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ) ರವರು ಈ ಹಿಂದೆಯೆ ಪರಿಶೀಲಿಸಿ, "Upload" ಮಾಡಿರುವ ಬಿಲ್‌ನ ಪಾವತಿಗಾಗಿ "Task" ಅನ್ನು "Forward" ಮಾಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಸ್ತುತ ಸದರಿ ಕಾಮಗಾರಿಯ 1ನೇ ಮತ್ತು ಭಾಗಶಃ ಬಿಲ್ಲನ್ನು ರೂ. 61,72,119/- ಪಾವತಿಗೆ ಸಂಬಂಧಿಸಿದಂತೆ ಅನುಷ್ಠಾನ ಅಭಿಯಂತರರುಗಳು ತಯಾರಿಸಿ, ದೃಢೀಕರಿಸಿ,, ಸಲ್ಲಿಸಿರುವ ಬಿಲ್ಲಿಗೆ ಸಂಬಂಧಿಸಿದಂತೆ ಮಾತ್ರ ಈ ಹಂತದಲ್ಲಿ ಕಾಮಗಾರಿಯ ಸ್ಥಳ ತಪಾಸಣೆಯನ್ನು ಭೌತಿಕವಾಗಿ ಕೈಗೊಳ್ಳಲಾಗಿದ್ದು, ಅನುಷ್ಠಾನ

05) ಹಂತದ ಅಭಿಯಂತರರು ಸದರಿ ಕಾಮಗಾರಿಯನ್ನು ಅಂದಾಜುಪಟ್ಟಿ ತಯಾರಿಕೆಯಿಂದ ಹಿಡಿದು ಗುಣಮಟ್ಟದ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ ದೃಢೀಕರಿಸಿದ್ದು, ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ಸ್ಥಳ ತಪಾಸಣಾ ಸಂದರ್ಭದಲ್ಲಿ ಕಾಮಗಾರಿಯು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ (ಸ್ಥಳ ಪರಿಶೀಲನಾ ಛಾಯಾಚಿತ್ರಗಳನ್ನು ಮಾಹಿತಿಗಾಗಿ ಕಡತದಲ್ಲಿ ಲಗತ್ತಿಸಿದೆ). ಈ ಮೇಲಿನ ಎಲ್ಲಾ ಅಂಶಗಳ ಆಧಾರದ ಮೇಲೆ ಕಾಮಗಾರಿಯನ್ನು ಭೌತಿಕವಾಗಿ ಅನುಷ್ಠಾನಗೊಳಿಸಿರುವುದಾಗಿ ಅಭಿಪ್ರಾಯಿಸಲಾಗಿರುತ್ತದೆ.

ಸ.ಕಾ.ಅ(ಟಿವಿಸಿಸಿ)

ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)

06) ಅಧೀಕ್ಷಕ ಅಭಿಯಂತರರು (ಟಿವಿಸಿಸಿ)

ವಿಷಯ : 012-20-000115

ಪುಟದ ಸಂಖ್ಯೆ —04—

ಕಡತದ ಸಂಖ್ಯೆ CE/TVCC/GL/01/24-25

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (01) ರಿಂದ (05) ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ. ಮಾನ್ಯ ಮುಖ್ಯ ಆಯುಕ್ತರುರವರು ಪಾಲಿಕೆಯಲ್ಲಿ ಕೈಗೊಂಡಿರುವ ಕೆ.ಆರ್.ಐ.ಡಿ.ಎಲ್ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿಸುವ ಕುರಿತು ಟಿವಿಸಿಸಿ ವಿಭಾಗದಿಂದ ತಪಾಸಣೆ ವಿಷಯಕ್ಕೆ ಸಂಬಂಧಿಸಿದ ಕಛೇರಿ ಆದೇಶದಲ್ಲಿ ಆದೇಶಿಸಿರುವಂತೆ, Improvements to roads and drains in Gangamma Police Station beside road in ward no 12 Shettyhalli, Shettyhalli Sub Division ಕಾಮಗಾರಿಯ 1ನೇ ಮತ್ತು ಭಾಗಶಃ ಹಂತದ ಬಿಲ್ಲಿನ ಕಾಮಗಾರಿಯ ತಪಾಸಣೆಯನ್ನು ಕೈಗೊಳ್ಳಲಾಗಿದ್ದು, ತಪಾಸಣೆ ಸಮಯದಲ್ಲಿ ಕಾಮಗಾರಿಯು ಭೌತಿಕವಾಗಿ ಅನುಷ್ಠಾನಗೊಳಿಸಿರುವುದು, ಸುಸ್ಥಿತಿಯಲ್ಲಿರುವುದು ಹಾಗೂ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದು ಗಮನಿಸಲಾಗಿರುವ ಅಂಶಗಳ ವರದಿಯನ್ನು ಅವಗಾಹನೆಗೆ ತರುತ್ತಾ, ಕಾಮಗಾರಿಯ ಬಿಲ್ಲನ್ನು ಪಾವತಿಸಬಹುದಾಗಿದೆ.

ಅಧೀಕ್ಷಕ ಅಭಿಯಂತರರು
(ಟಿವಿಸಿಸಿ) 24/6/2024

ಮುಖ್ಯ ಅಭಿಯಂತರರು
(ಟಿವಿಸಿಸಿ) 24/6/2024

ಮಾನ್ಯ ಮುಖ್ಯ ಆಯುಕ್ತರು] Agreed. 75% of the bill amount may be paid.

25.6.24

ಮುಖ್ಯ ಆಡಳಿತಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎ. ಕಾರ್ಯನಿರ್ವಾಹಕ ಅಧಿಕಾರಿ

Special Commissioner (Finance)
BRUHAT BENGALURU MAHANAGARA PALIKE

A-5)

ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ ಸ್ವೀಕೃತವಾಗಿದೆ(ಪ್ರ) ದಿನಾಂಕ 27/6/2024
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಿನಾಂಕ 24/6/24
ಟಪಾಲು ಸಂಖ್ಯೆ 6558 ನಿರ್ವಹಣಾ ಅಯುಕರು (ಹಣಕಾಸು) ರವರ ಕಛೇರಿ
ದಿನಾಂಕ 02/07/24

Name of the Work: IMPROVEMENTS TO ROADS AND DRAINS IN GANGAMMA POLICE STATION BESIDE ROAD IN WARD NO.12 SHETTYHALLI,SHITTEYHALLI SUB DIVISION. JOB CODE:012-20-000115 P CODE- P3296

TVCC ENGINEERS INSPECTION AT WORKING LOCATION



Name of the Work: IMPROVEMENTS TO ROADS AND DRAINS IN GANGAMMA POLICE STATION BESIDE ROAD IN WARD NO.12 SHETTYHALLI,SHTTEYHALLI SUB DIVISION. JOB CODE:012-20-000115 P CODE- P3296